# ಕರ್ನಾಟಕ ಸರ್ಕಾರದ ನಡವಳಿ

**ವಿಷಯ:** **ಶ್ರೀ ಜಾನಿ ನಾವೆಲ್ ಬಿ ರೋಡ್ರಿಕ್ಸ್, ಕಾರ್ಯದರ್ಶಿ, ಕರಡಿ ಗ್ರಾಮಪಂಚಾಯತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ, ಮತ್ತು ಮೇಲ್ಮನವಿ) ನಿಯಮಾವಳಿಗಳು 1957ರ ನಿಯಮ 14ಎ ಅಡಿಯಲ್ಲಿ ಮಾನ್ಯ ಉಪಲೋಕಯುಕ್ತರಿಗೆ ವಹಿಸುವ ಬಗ್ಗೆ – ಆದೇಶ.**

**ಓದಲಾಗಿದೆ:**

1. ಮಾನ್ಯ ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ:ಕಂಪ್ಲೇಂಟ್/ಬಿಡಿ/419/2009/ಎಆರ್‌ಎಲ್‌ಓ–2, ದಿನಾಂಕ: 11-09-2017.
2. ಮಾನ್ಯ ಉಪಲೋಕಾಯಕ್ತರವರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಅ.ಸ.ಪ.ಸಂ:ಕಂಪ್ಲೇಂಟ್/ಬಿಡಿ/419/2009/ಎಆರ್‌ಎಲ್‌ಓ–2, ದಿನಾಂಕ: 31-08-2017.

**ಪ್ರಸ್ತಾವನೆ:**

ಮೇಲೆ ಓದಲಾದ ನಿಬಂಧಕರು, ಕರ್ನಾಟಕ ಲೋಕಾಯುಕ್ತ ಇವರ ಪತ್ರದ ಸಂಗಡ ಕಳುಹಿಸಿರುವ ಮಾನ್ಯ ಉಪಲೋಕಾಯುಕ್ತರು ದಿನಾಂಕ: 31.08.2017ರಂದು ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(3)ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ಶ್ರೀ ಎನ್.ಎಮ್.ಸುರೇಶ, ನ್ಯಾಕೇನಹಳ್ಳಿ ಗ್ರಾಮದ ವಾಸಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಶ್ರೀ ಕೆ ಆರ್ ದೇವರಾಜು, ಅಧ್ಯಕ್ಷರು, ಕರಡಿ ಗ್ರಾಮಪಂಚಾಯತಿ ಮತ್ತು 2) ಶ್ರೀ ಜಾನಿ ನಾವೆಲ್ ಬಿ ರೋಡ್ರಿಕ್ಸ್, ಕಾರ್ಯದರ್ಶಿ, ಕರಡಿ ಗ್ರಾಮಪಂಚಾಯತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ "1 ಮತ್ತು 2ನೇ ಎದುರುದಾರರು" ಎಂದು ಕ್ರಮವಾಗಿ ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

**ದೂರಿನ ಸಂಕ್ಷಿಪ್ತ ವಿವರಣೆ:**

ದೂರುದಾರರು ತಮ್ಮ ದೂರಿನಲ್ಲಿ ತಿಪಟೂರು ತಾಲ್ಲೂಕು ಕರಡಿ ಗ್ರಾಮ ಪಂಚಾಯತಿಯಲ್ಲಿ ಎದುರುದಾರರು 2007-08ನೇ ಸಾಲಿನ ಹಣಕಾಸು ಯೋಜನೆಯಡಿ ಬಿಡುಗಡೆಯಾದ ಅನುದಾನವನ್ನು ಕಾಮಗಾರಿ ನಿರ್ವಹಿಸದೆ ಬಿಲ್ ಮಾಡಿ ಹಣ ದುರುಪಯೋಗ ಮಾಡಿರುತ್ತಾರೆ. 2006-07ನೇ ಸಾಲಿನ ಗ್ರಾಮೀಣ ವಸತಿ ಯೋಜನೆಯಡಿ ಮಂಜೂರಾದ ಮನೆಗಳನ್ನು ದಾಖಲೆ ಪಡೆಯದೆ, ಮನೆಗಳನ್ನು ನಿರ್ಮಿಸದೆ ಬಿಲ್ ಪಾವತಿಸಿರುತ್ತಾರೆ. ಆದ್ದರಿಂದ ಈ ಬಗ್ಗೆ ಪರಿಶೀಲಿಸಿ ಎದುರುದಾರರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ಕೋರಿ ದೂರು ಸಲ್ಲಿಸಿದ್ದಾರೆ. ಈ ಪ್ರಕರಣವನ್ನು ತಾಂತ್ರಿಕ ಇಲಾಖೆಯವರು ತನಿಖೆ ಮಾಡಿ ವರದಿ ಸಲ್ಲಿಸಿರುತ್ತಾರೆ.

ಎದುರುದಾರರು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ತುಮಕೂರು ಇವರಿಗೆ ತಾವು ಯಾವುದೇ ಹಣ ದುರುಪಯೋಗಪಡಿಸಿಕೊಂಡಿರುವುದಿಲ್ಲ ಮತ್ತು 2005-06, 2007-08ನೇ ಸಾಲಿನ ಆಶ್ರಯ ಯೋಜನೆಯಡಿಯಲ್ಲಿ ಮಂಜೂರಾದ ಮನೆಗಳಿಗೆ ಮನೆ ಕಟ್ಟಿದ ನಂತರವೇ ಬಿಲ್ ಪಾವತಿಸಿದ್ದು, ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಹೇಳಿಕೆ ಸಲ್ಲಿಸಿರುತ್ತಾರೆ. ದೂರುದಾರರು ತಮ್ಮ ಪ್ರತ್ಯುತ್ತರ ಸಲ್ಲಿಸಿರುವುದಿಲ್ಲ.

ದೂರುದಾರರು ಸಲ್ಲಿಸಿದ ದೂರು, ಆಕ್ಷೇಪಣೆ, ತನಿಖಾ ವರದಿ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ತಾಂತ್ರಿಕ ವಿಭಾಗದವರ ತನಿಖಾ ವರದಿಯಲ್ಲಿನ 2006-07ನೇ ಸಾಲಿನ ಆಶ್ರಯ ವಸತಿ ಯೋಜನೆ ಮತ್ತು 2007-08ನೇ ಸಾಲಿನ ಎಸ್.ಜಿ.ಆರ್.ವೈ ಯೋಜನೆಯಡಿ ಕಾಮಗಾರಿ ಕುರಿತು ತನಿಖೆ ನಡೆಸಿ ಆರೋಪಗಳು ಸಾಬೀತಾದ ಹಿನ್ನೆಲೆಯಲ್ಲಿ ಎದುರುದಾರರನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ತುಮಕೂರು ಇವರ ಆದೇಶಸಂಖ್ಯೆ:ತುಜಿಪ/ಸಭಾ/ಸಿ(2)/ವಿವ-06/2008-09, ದಿನಾಂಕ:03.11.2008ರ ಆದೇಶದ ಪ್ರಕಾರ ಅಮಾನತ್ತು ಮಾಡಿರುತ್ತಾರೆಂದು ಕಾರ್ಯನಿರ್ವಾಹಕ ಅಧಿಕಾರಿಗಳು ತನಿಖಾಧಿಕಾರಿಗಳಿಗೆ ದಾಖಲೆ ನೀಡಿರುತ್ತಾರೆ.

2005-06ನೇ ಸಾಲಿನ ಗ್ರಾಮೀಣ ಆಶ್ರಯ ಯೋಜನೆಯ ಫಲಾನುಭವಿಯಾದ ಮಹದೇವಮ್ಮ ಕೋಂ ಚನ್ನಿಗರಾಯಪ್ಪ ಶೆಟ್ಟಿಹಳ್ಳಿ ಇವರ ಮನೆಯನ್ನು ಪರಿಶೀಲಿಸಲಾಗಿ ಫಲಾನುಭವಿಯು ಪರಿಶಿಷ್ಟ ಜಾತಿಗೆ ಸೇರಿದ್ದು ಮನೆಯು ಹಳೆಯದಾಗಿದ್ದು ಖಾಲಿ ಹಂಚನ್ನು ಮಾತ್ರ ಬದಲಿಸಿರುತ್ತಾರೆ. ಆದರೆ ಹೊಸ ಮನೆಯನ್ನು ನಿರ್ಮಿಸದೆ ಹಳೆಯ ಮನೆಯನ್ನು ರಿಪೇರಿ ಮಾಡಿಸಿರುತ್ತಾರೆ. ಈ ಬಗ್ಗೆ ದಾಖಲೆ ಪರಿಶೀಲಿಸಿದಾಗ ಮಹದೇವಮ್ಮ ಅವರ ಹೆಸರು ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮದಲ್ಲಿ ಅನುಮೋದನೆಗೊಂಡ ಪಟ್ಟಿಯಲ್ಲಿರುತ್ತದೆ. 2005-06ನೇ ಸಾಲಿನ ಯೋಜನೆಯಲ್ಲಿ ಮನೆ ಮಂಜೂರಾಗಿದ್ದು, ಇವರು ಬೇರೆಯವರಿಂದ ಸಾಲ ಪಡೆದು ಮನೆಯನ್ನು ಪೂರ್ಣಗೊಳಿಸಿರುವುದಾಗಿ ತಿಳಿಸಿರುತ್ತಾರೆ. ಗ್ರಾಮ ಪಂಚಾಯತಿಯಿಂದ ಮನೆ ಕಟ್ಟುವ ಲೈಸನ್ಸ್ ದಿನಾಂಕ:16.03.2008 ರಂದು ನೀಡಿದ್ದು, ಆದರೆ ನಿರ್ಮಿಸುವ ಹಂತದಲ್ಲಿ ಯಾವುದೇ ಗುರುತು ಪುರಾವೆಗಳನ್ನು ಸಲ್ಲಿಸದಿದ್ದರೂ ಸಹ ಅಧ್ಯಕ್ಷರ ಸಹಿ ಇಲ್ಲದೆ ಮೊದಲ ಬಿಲ್ಲನ್ನು ದಿನಾಂಕ:10.06.2008ರಂದು ರೂ.5000/-ಗಳನ್ನು ದಿ:27.06.2008ರಂದು ರೂ.5000/-ಗಳನ್ನು ಕೇವಲ 17 ದಿನಗಳ ಅಂತರದಲ್ಲಿ ಪಾವತಿಸಿರುವುದು ತನಿಖಾ ವರದಿಯಲ್ಲಿ ಅಭಿಪ್ರಾಯಪಟ್ಟಿರುತ್ತಾರೆ.

2006-07ನೇ ಸಾಲಿನ ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ ಪುಟ್ಟ ನರಸಮ್ಮ ಕೋಂ ಹುಚ್ಚಪ್ಪ ಶೆಟ್ಟಿಹಳ್ಳಿ ಇವರ ಮನೆಯನ್ನು ಪರಿಶೀಲಿಸಿದಾಗ ಮನೆಯು ಹಳೆಯದಾಗಿದ್ದು, ಮುಂದಿನ ವರಾಂಡದ ಭಾಗವನ್ನು ಮಾತ್ರ ವಿಸ್ತರಿಸಿಕೊಂಡಿರುತ್ತಾರೆ. ಈ ಬಗ್ಗೆ ಕಡತ ಪರಿಶೀಸಲಾಗಿ ಇವರ ಹೆಸರು ಫಲಾನುಭವಿಗಳ ಪಟ್ಟಿಯಲ್ಲಿದ್ದು, ಆದರೆ ಒಂದೇ ಒಂದು ಫೋಟೊ ಸಹ ಲಭ್ಯವಿರುವುದಿಲ್ಲ. ಮನೆ ನಿರ್ಮಾಣವನ್ನು ಕೇವಲ 2 ತಿಂಗಳಲ್ಲಿ ಪೂರ್ಣಗೊಳಿಸಿ ಚೆಕ್ ನೀಡಿರುವುದು ಕಂಡುಬರುತ್ತದೆ. ದಿ:01.04.2008 ರಂದು ರೂ.5000/-, ದಿ:02.05.2008, 13.05.2008 ಮತ್ತು 27.05.2008 ರಂದು ಚೆಕ್ಕುಗಳನ್ನು ಕ್ರಮವಾಗಿ ರೂ.7000/-, ರೂ.8000/- ಮತ್ತು ರೂ.10000/-ಗಳಂತೆ ಒಂದೇ ತಿಂಗಳಲ್ಲಿ ಅಧ್ಯಕ್ಷರ ಸಹಿಯಿಲ್ಲದೆ ಶ್ರೀ ಜಾನಿ ನಾವೆಲ್ ಬಿ ರೋಡ್ರಿಕ್ಸ್ ರವರು ಪಾವತಿಸಿರುತ್ತಾರೆ. ಆದ್ದರಿಂದ ಇವರು ಕರ್ತವ್ಯಲೋಪವೆಸಗಿದ್ದಾರೆಂದು ತನಿಖಾಧಿಕಾರಿಗಳು ಅಭಿಪ್ರಾಯಪಟ್ಟಿರುತ್ತಾರೆ.

ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳು ಸ್ಥಳ ತನಿಖೆ ನಡೆಸಿ ಶ್ರೀ ಜಾನಿ ನಾವೆಲ್ ಬಿ ರೋಡ್ರಿಕ್ಸ್ ರವರನ್ನು ಅಮಾನತ್ತುಗೊಳಿಸಿ ನಂತರ ತನಿಖೆಯನ್ನು ಕಾಯ್ದಿರಿಸಿ ಪುನಃ ಕರ್ತವ್ಯಕ್ಕೆ ಹಾಜರಾಗಲು ಆದೇಶಿಸಿರುತ್ತಾರೆ. ಕರಡಿ ಗ್ರಾಮ ಪಂಚಾಯತಿ ಕಛೇರಿಗೆ ಬೆಂಕಿ ಅವಘಡ ಸಂಭವಿಸಿದ ಹಿನ್ನೆಲೆಯಲ್ಲಿ ಪೋಲಿಸರಿಗೆ ದೂರು ನೀಡಿದ ಬಗ್ಗೆ ಹಾಗೂ ದಾಖಲೆಗಳು ಸುಟ್ಟುಹೋದ ಬಗ್ಗೆ ಪೋಲಿಸರು ಮಹಜರು ಮಾಡಿದ ದಾಖಲೆಗಳನ್ನು ತನಿಖಾಧಿಕಾರಿಗಳಿಗೆ ಸಲ್ಲಿಸಿರುತ್ತಾರೆ.

ಈ ಎಲ್ಲಾ ಅಂಶಗಳನ್ನು ಪರಿಶೀಲಿಸಲಾಗಿ, ಶ್ರೀ ಜಾನಿ ನಾವೆಲ್ ಬಿ ರೋಡ್ರಿಕ್ಸ್ ರವರು ತಮ್ಮ ಅಧಿಕಾರಾವಧಿಯಲ್ಲಿ ಮನೆ ನಿರ್ಮಿಸದಿದ್ದರೂ ಫಲಾನುಭವಿಗಳಿಗೆ ಚೆಕ್ ನೀಡಿ ಅವ್ಯವಹಾರವೆಸಗಿರುತ್ತಾರೆಂದು ಕಂಡುಬರುತ್ತದೆ. ಇವರು ಈ ರೀತಿ ಅವ್ಯವಹಾರ ಮಾಡಿದ ಕಾರಣ ಇವರನ್ನು ಸೇವೆಯಿಂದ ಅಮಾನತ್ತು ಮಾಡಿ, ಪುನಃ ವಿಚಾರಣೆಯನ್ನು ಕಾಯ್ದಿರಿಸಿ ಕರ್ತವ್ಯಕ್ಕೆ ಹಾಜರಾಗಲು ಆದೇಶಿಸಿರುತ್ತಾರೆ. 2ನೇ ಎದುರುದಾರರಾದ ಶ್ರೀ ಜಾನಿ ನಾವೆಲ್ ಬಿ ರೋಡ್ರಿಕ್ಸ್‌ರವರು ಈ ಕೆಳಗಿನಂತೆ ಅವ್ಯವಹಾರ ಮಾಡಿಸಿರುತ್ತಾರೆ.

| **ಕ್ರ.ಸಂ.** | **ಸಾಲು** | **ಫಲಾನುಭವಿಯ ಹೆಸರು** | **ನಿವೇಶನದ ಹಾಲಿ ಪರಿಸ್ಥಿತಿ** | **ಅವ್ಯವಹಾರದ ಮನೆ ನಿರ್ಮಾಣ ಮೊತ್ತ** | **ಅಧಿಕಾರಿಯ ಹೆಸರು** |
|---|---|---|---|---|---|
| 1 | 2005-06ನೇ ಸಾಲಿನಗ್ರಾಮೀಣ ಆಶ್ರಯ ಯೋಜನೆ | ಮಹದೇವಮ್ಮ ಕೋಂ ಚನ್ನಿಗರಾಯಪ್ಪ, ಶೆಟ್ಟಿಹಳ್ಳಿ | ಮನೆ ನಿರ್ಮಾಣ ಮಾಡದೇ ಹೊಸ ಹಂಚಿನ ಛಾವಣಿ ಹಾಕಿರುತ್ತಾರೆ. | ರೂ.10,000/- | ಶ್ರೀ ಜಾನಿ ನಾವೆಲ್ ರೋಡ್ರಿಕ್ಸ್ |
| 2 | 2006-07ನೇ ಸಾಲಿನಗ್ರಾಮೀಣ ಆಶ್ರಯ ಯೋಜನೆ | ಪುಟ್ಟನರಸಮ್ಮ ಕೋಂಲೇ.ಹುಚ್ಚಪ್ಪ, ಶೆಟ್ಟಿಹಳ್ಳಿ | ವರಾಂಡ ಮಾತ್ರ ಮಾಡಿರುತ್ತಾರೆ. | ರೂ.30,000/- | ಶ್ರೀ ಜಾನಿ ನಾವೆಲ್ ರೋಡ್ರಿಕ್ಸ್ |

1ನೇ ಎದುರುದಾರರು ಗ್ರಾಮ ಪಂಚಾಯತಿ ಅಧ್ಯಕ್ಷರಾಗಿದ್ದು, ಈಗ ಅವರ ಅಧಿಕಾರವಧಿ ಮುಗಿದಿದ್ದು ಅವರ ವಿರುದ್ಧ ಆಪಾದನೆಗಳು ಸಾಬೀತಾಗದ ಕಾರಣ ಅವರನ್ನು ಪ್ರಕರಣದಿಂದ ಕೈಬಿಡಲಾಗಿದೆ. ಆದರೆ 2ನೇ ಎದುರುದಾರರಾದ ಶ್ರೀ ಜಾನಿ ನಾವೆಲ್ ಬಿ ರೋಡ್ರಿಕ್ಸ್, ಕಾರ್ಯದರ್ಶಿ ಒಟ್ಟು ರೂ.40,000/-ಗಳ ಆಶ್ರಯ ಯೋಜನೆಯ ಅನುದಾನವನ್ನು ದುರುಪಯೋಗಪಡಿಸಿಕೊಂಡು ಕರ್ತವ್ಯಲೋಪವೆಸಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

ಈ ಹಿನ್ನೆಲೆಯಲ್ಲಿ ಶ್ರೀ ಜಾನಿ ನಾವೆಲ್ ಬಿ ರೋಡ್ರಿಕ್ಸ್, ಕಾರ್ಯದರ್ಶಿ ಇವರು ಸರ್ಕಾರಿ ನೌಕರರಾಗಿದ್ದು, ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯಮಾವಳಿ, 1966ರ ನಿಯಮ 3(1)(i) ಮತ್ತು (ii)ರನ್ವಯ ದುರ್ನಡತೆಯೆಸಗಿದ್ದು, ಶಿಸ್ತು ಕ್ರಮಕ್ಕೆ ಬಾಧ್ಯರಾಗಿರುವುದು ಕಂಡು ಬರುವುದರಿಂದ, ಸದರಿಯವರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ) ರಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಮಾನ್ಯ ಉಪಲೋಕಾಯುಕ್ತರ ವರದಿಯನ್ನು ಪರಿಶೀಲಿಸಿ ಈ ಪ್ರಕರಣದಲ್ಲಿ ಒಳಗೊಂಡಿರುವ ನೌಕರರ ವಿರುದ್ಧ ವಿಚಾರಣೆ ನಡೆಸುವುದು ಸೂಕ್ತವೆಂದು ಭಾವಿಸಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು, 1957ರ ನಿಯಮ 14-ಎ ರನ್ವಯ ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸುವ ಸಲುವಾಗಿ ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/742/ಗ್ರಾಪಂಕಾ/2017 ಬೆಂಗಳೂರು, ದಿನಾಂಕ: 21-10-2017.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಜಾನಿ ನಾವೆಲ್ ಬಿ ರೋಡ್ರಿಕ್ಸ್, ಕಾರ್ಯದರ್ಶಿ, ಕರಡಿ ಗ್ರಾಮಪಂಚಾಯತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣಾ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 11ರ ಅನುಸಾರ ಇಲಾಖಾ ವಿಚಾರಣೆ ನಡೆಸಲು ಸದರಿ ನಿಯಮಗಳು ನಿಯಮ 14-ಎ ಅಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿದೆ.

ಈ ಪ್ರಕರಣದಲ್ಲಿ ಸರ್ಕಾರವು ಶಿಸ್ತು ಪ್ರಾಧಿಕಾರವಾಗಿದ್ದು, ಆಪಾದಿತರಿಗೆ, ನಿಯಮಾನುಸಾರ ಸೂಕ್ತ ದಂಡನೆ ವಿಧಿಸಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

**ಗೆ,**

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ, ಬೆಂಗಪಳೂರು.

3. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು. (ಪುಟ 1 ರಿಂದ 164 ರವರೆಗಿನ ಮೂಲ ದಾಖಲೆಗಳನ್ನು ಇದರೊಂದಿಗೆ ಲಗತ್ತಿಸಿ ಹಿಂದಿರುಗಿಸಿದೆ).
4. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ತುಮಕೂರು ಜಿಲ್ಲೆ.
5. ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತಿ ತಿಪಟೂರು, ತುಮಕೂರು ಜಿಲ್ಲೆ.
6. ಶ್ರೀ ಜಾನಿ ನಾವೆಲ್ ಬಿ ರೋಡ್ರಿಕ್ಸ್, ಕಾರ್ಯದರ್ಶಿ, ಕರಡಿ ಗ್ರಾಮಪಂಚಾಯತಿ, ತಿಪಟೂರು ತಾಲ್ಲೂಕು, ತುಮಕೂರು ಜಿಲ್ಲೆ.
7. ಗಣಕಕೋಶ.
8. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.